ಕರ್ನಾಟಕ ಸರ್ಕಾರ
ಸಾರಿಗೆ ಇಲಾಖೆ

ಸಂ.ಸಾಆ/ನೋಂದಣಿ-1/ಪಿಆರ್-845/2016-17

ಸಾರಿಗೆ ಆಯುಕ್ತರ ಕಛೇರಿ,
1ನೇ ಮಹಡಿ, ಟಿಟಿಎಂಸಿ ಕಟ್ಟಡ,
ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು-560 027
ದಿನಾಂಕ:12-01-2017.

**ಇವರಿಗೆ**

ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು
ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ
ಪ್ರಾದೇಶಿಕ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು
(ತನಿಖಾಠಾಣೆಗಳೂ ಸೇರಿದಂತೆ).

ಮಾನ್ಯರೆ,

ವಿಷಯ: ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 32 ಮತ್ತು 81ರಡಿ ಶುಲ್ಕಗಳನ್ನು ಪರಿಷ್ಕರಿಸಿ ಕೇಂದ್ರ ಸರ್ಕಾರವು ಹೊರಡಿಸಿರುವ ಅಧಿಸೂಚನೆ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಅವರಿಂದ ಹೊರಡಿಸಿರುವ ಅಧಿಸೂಚನೆ ಸಂಖ್ಯೆ.ಜಿ.ಎಸ್.ಆರ್.1183 (ಇ) ದಿನಾಂಕ:29-12-2016.
2. ಈ ಕಛೇರಿಯ ಸಮಸಂಖ್ಯೆಯ ಪತ್ರ ದಿನಾಂಕ:06-01-2017.
3. ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಸೋಸಿಯೇಷನ್(ರಿ) ಬೆಂಗಳೂರು-18 ಇವರ ಮನವಿ ದಿನಾಂಕ:11-01-2017.
4. ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್(ರಿ) ಬೆಂಗಳೂರು-18 ಇವರ ಮನವಿ ದಿನಾಂಕ:12-01-2017.

OFFICE OF THE COMMISSIONER FOR TRANSPORT * BANGALORE *

**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಕಾಣಿಸಿರುವ ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಅವರಿಂದ ಹೊರಡಿಸಿರುವ ಅಧಿಸೂಚನೆಯಲ್ಲಿ ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 32 ಮತ್ತು 81ರಡಿ ನಿಗದಿಪಡಿಸಿರುವ ಶುಲ್ಕಗಳನ್ನು ಪರಿಷ್ಕರಿಸಲಾಗಿರುತ್ತದೆ ಮತ್ತು ಈ ಅಧಿಸೂಚನೆಯು ಭಾರತ ಸರ್ಕಾರದ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಅಂದರೆ ದಿನಾಂಕ:29-12-2016 ರಿಂದ ಜಾರಿಗೆ ಬರುತ್ತದೆ ಎಂದು ತಿಳಿಸಲಾಗಿರುತ್ತದೆ. ಆದರೆ, ಸದರಿ ಅಧಿಸೂಚನೆಯು ಈ ಕಛೇರಿಯಲ್ಲಿ ದಿನಾಂಕ:06-01-2017ರಂದು ಸ್ವೀಕೃತಿಯಾಗಿದ್ದು, ಅದೇ ದಿನ ಸಾರಿಗೆ ಇಲಾಖೆಯ ಎಲ್ಲಾ ಅಧೀನ ಕಛೇರಿಗಳಿಗೆ ಉಲ್ಲೇಖ(2)ರಲ್ಲಿ ಕಾಣಿಸಿರುವ ಈ ಕಛೇರಿಯ ಪತ್ರದೊಂದಿಗೆ ಅಧಿಸೂಚನೆಯ ಪ್ರತಿಯನ್ನು ಕಳುಹಿಸಿಕೊಡಲಾಗಿದ್ದು, ಅಧಿಸೂಚನೆಯನ್ವಯ ಕೂಡಲೇ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಆದರೆ, ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಸೋಸಿಯೇಷನ್(ರಿ) ಬೆಂಗಳೂರು-18 ಹಾಗೂ ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್(ರಿ) ಬೆಂಗಳೂರು-18 ಇವರುಗಳು ಕ್ರಮವಾಗಿ ಸಲ್ಲಿಸಿರುವ ಉಲ್ಲೇಖ(3) ಮತ್ತು (4)ರ ಮನವಿಗಳಲ್ಲಿ, ಕೇಂದ್ರ ಸರ್ಕಾರವು ಏಕಾಏಕಿ ಶೇ.100 ರಿಂದ 200ರವರೆಗೆ ಶುಲ್ಕಗಳನ್ನು ಹೆಚ್ಚಿಸಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಈ ಬಗ್ಗೆ ಪರಿಶೀಲಿಸಲು ಕೋರಿದ್ದಾರೆ. ಅಲ್ಲದೆ, ಕೇಂದ್ರ ಮೋಟಾರು ವಾಹನ

--2

ನಿಯಮಾವಳಿ 1989ರ ನಿಯಮ 81ರಡಿ ಪರಿಷ್ಕರಿಸಿ ನಿಗದಿಪಡಿಸಿರುವ ಕೋಷ್ಟಕದ ಕ್ರಮ ಸಂಖ್ಯೆ.(11)ರಲ್ಲಿ Grant or renewal of certificate of fitness for motor vehicle = Two Hundred Rupee. Note: Additional fee of fifty rupees for each day of delay after expiry of certificate of fitness shall be levied ಎಂದು ಇದ್ದು, ಈ ಹೆಚ್ಚಳದಿಂದಾಗಿ ವಾಹನ ಮಾಲೀಕರು ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತದೆ ಎಂದು ತಿಳಿಸುತ್ತಾ, ಈ ಬಗ್ಗೆ ಪುನರ್-ಪರಿಶೀಲಿಸಲು ಕೇಂದ್ರ ಸರ್ಕಾರದ ಗಮನಕ್ಕೆ ತರಲು ಕೋರಿರುತ್ತಾರೆ. ಅಲ್ಲದೆ, ಹಲವಾರು ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಈಗಾಗಲೇ ಅರ್ಹತಾಪತ್ರ ಅವಧಿ ಮುಕ್ತಾಯವಾದ ಪ್ರಕರಣಗಳಲ್ಲಿ ವಿಳಂಬವಾಗಿ ಅರ್ಹತಾಪತ್ರ ನವೀಕರಣಕ್ಕೆ ಬಂದಾಗ, ಅವಧಿ ಮುಕ್ತಾಯದ ದಿನಾಂಕದಿಂದಲೇ ಹೆಚ್ಚುವರಿ ಶುಲ್ಕ/ ದಂಡವನ್ನು ಪಾವತಿಸಲು ಒತ್ತಾಯಿಸುತ್ತಿರುವುದಾಗಿ, ಆದ್ದರಿಂದ, ಮೇಲ್ಕಂಡ ಅಧಿಸೂಚನೆ ಜಾರಿಗೆ ಬರುವ ಪೂರ್ವದಲ್ಲಿ ಅರ್ಹತಾಪತ್ರದ ಅವಧಿ ಮುಕ್ತಾಯವಾಗಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಅಧಿಸೂಚನೆಗೆ ಜಾರಿಗೆ ಬರುವ ದಿನಾಂಕದವರೆಗೆ ಅಂದರೆ ದಿನಾಂಕ:28-12-2016 ರವರೆಗೆ ಹಳೆಯ ದಂಡದ ಮೊತ್ತವನ್ನೇ ವಿಧಿಸಲು ಹಾಗೂ ಅಧಿಸೂಚನೆ ಜಾರಿಗೆ ಬಂದ ದಿನಾಂಕ: 29-12-2016 ರಿಂದ ಹೊಸ ಹೆಚ್ಚುವರಿ ಶುಲ್ಕ/ ದಂಡವನ್ನು ವಸೂಲು ಮಾಡಲು ಕ್ರಮವಹಿಸುವಂತೆ ಸೂಚಿಸಲು ಕೋರಿರುತ್ತಾರೆ.

ಆದ್ದರಿಂದ, ಈಗಾಗಲೇ ಅರ್ಹತಾಪತ್ರ ಅವಧಿ ಮುಕ್ತಾಯವಾದ ಪ್ರಕರಣಗಳಲ್ಲಿ ಮೇಲ್ಕಂಡ ಅಧಿಸೂಚನೆ ಜಾರಿಗೆ ಬರುವ ಪೂರ್ವದಲ್ಲಿ ಅರ್ಹತಾಪತ್ರದ ಅವಧಿ ಮುಕ್ತಾಯವಾಗಿದ್ದಲ್ಲಿ ಅಂತಹ ಪ್ರಕರಣ ಗಳಲ್ಲಿ ಅಧಿಸೂಚನೆಗೆ ಜಾರಿಗೆ ಬರುವ ದಿನಾಂಕದವರೆಗೆ ಅಂದರೆ ದಿನಾಂಕ:28-12-2016 ರವರೆಗೆ ಹಳೆಯ ದಂಡದ ಮೊತ್ತವನ್ನೇ ವಸೂಲು ಮಾಡುವಂತೆ ಹಾಗೂ ಅಧಿಸೂಚನೆ ಜಾರಿಗೆ ಬಂದ ದಿನಾಂಕ: 29-12-2016 ರಿಂದ ಹೊಸದಾಗಿ ಜಾರಿಗೆ ಬಂದಿರುವ ಹೆಚ್ಚುವರಿ ಶುಲ್ಕ/ ದಂಡದ ಮೊತ್ತವನ್ನು ವಸೂಲು ಮಾಡಲು ಕ್ರಮವಹಿಸುವಂತೆ ಹಾಗೂ ಅರ್ಹತಾಪತ್ರ ನೀಡಿಕೆ / ನವೀಕರಣದ ಶುಲ್ಕವನ್ನು ಮಾತ್ರ ಹೊಸ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ದರದಂತೆಯೇ ವಿಧಿಸಲೂ ಸಹ ಸೂಚಿಸಲಾಗಿದೆ. ಈ ಬಗ್ಗೆ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಕ್ರಮ ವಹಿಸಲು ಈ ಮೂಲಕ ಮತ್ತೊಮ್ಮೆ ತಿಳಿಯಪಡಿಸಲಾಗಿದೆ.

THE COMMISSIONER FOR TRANSPORT ... BANGALORE

ತಮ್ಮ ವಿಶ್ವಾಸಿ,
ಸಹಿ/-
ಆಯುಕ್ತರು, ಸಾರಿಗೆ ಮತ್ತು
ರಸ್ತೆ ಸುರಕ್ಷತೆ, ಬೆಂಗಳೂರು

ಪ್ರತಿಯನ್ನು

1. ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು, ಜಂಟಿ ಸಾರಿಗೆ ಆಯುಕ್ತರುರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು- 560 001 ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಜಂಟಿ ಸಾರಿಗೆ ಆಯುಕ್ತರು(ಪರಿಸರ & ಇ-ಆಡಳಿತ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಮತ್ತು ಸದರಿ ಪತ್ರದ ಪ್ರತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ನೀಡಲಾಗಿದೆ.
4. ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಸೋಸಿಯೇಷನ್(ರಿ), ನಂ.2, 1ನೇ ಮಹಡಿ, ಚಿಕ್ಕಣ್ಣ ಗಾರ್ಡನ್, ಶಂಕರಪುರಂ, ಬೆಂಗಳೂರು-560 018 ಇವರ ಮಾಹಿತಿಗಾಗಿ.
5. ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್(ರಿ) ಪಿಜಿಎಂ.1, ಬಿ.ಕೆ.ಮರಿಯಪ್ಪ ಹಾಸ್ಟೆಲ್ ಬಿಲ್ಡಿಂಗ್, 1ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018 ಇವರ ಮಾಹಿತಿಗಾಗಿ.
6. ಕಛೇರಿ ಪ್ರತಿ.

ಆಯುಕ್ತರು, ಸಾರಿಗೆ ಮತ್ತು
ರಸ್ತೆ ಸುರಕ್ಷತೆ, ಬೆಂಗಳೂರು